10. ಮೈಸೂರು ವಿಧಾನಸಭೆಯ ಹತ್ತಿರ ಸಭೆಗಳನ್ನು ನಿಷೇಧಿಸುವ ಅಧಿನಿಯಮ, 1951ರಲ್ಲಿ (1951ರ ಮೈಸೂರು ಅಧಿನಿಯಮ XV).

ರಾಜ್ಯ ವಿಧಾನ ಸಭೆಯ ಕಾರ್ಯಕಲಾಪಗಳನ್ನು ಅಡಚಣೆಯಿಲ್ಲದ ನಡೆಸಲು ಈ ಅಧಿನಿಯಮವು, ಮೈಸೂರು ರಾಜ್ಯದ ವಿಧಾನಸಭೆಯ ಅಧಿವೇಶನಗಳು ನಡೆಯುವ ಸ್ಥಳದಿಂದ ಅರ್ಧ ಕಿಲೋಮೀಟರ್ ದೂರದವರೆಗಿನ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸುವುದು ಮತ್ತು ಜನಗಳು ಒಗ್ಗೂಡುವುದು ಮುಂತಾದವುಗಳನ್ನು ನಿಷೇಧಿಸುತ್ತದೆ. ರಾಜ್ಯ ವಿಧಾನ ಮಂಡಲವು ಈಗ ಎರಡು ಸದನಗಳನ್ನು ಹೊಂದಿರುತ್ತದೆ. ಸರ್ಕಾರವು ರಾಜ್ಯ ವಿಧಾನಮಂಡಲದ ಸದನಗಳನ್ನು ಬೆಂಗಳೂರಿನಿಂದ ಹೊರಭಾಗದಲ್ಲೂ ನಡೆಸಲು ನಿರ್ಧರಿಸಲಾಗಿದೆ. ಏಕಸದಸ್ಯ ಆಯೋಗವು ಈ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿಗಳನ್ನು ತರಲು ಸಲಹೆ ನೀಡಿದೆ.

11. ಮೈಸೂರು ಸ್ವತ್ತುಗಳ ವರ್ಗಾವಣೆ (ಕೃಷಿ ಭೂಮಿಗಳಿಗೆ ವ್ಯಾಪ್ತಿ) ಅಧಿನಿಯಮ, 1951ರಲ್ಲಿ (1951ರ ಮೈಸೂರು ಅಧಿನಿಯಮ XXXII)

ರಾಜ್ಯದ ಮೈಸೂರು ಪ್ರದೇಶದಲ್ಲಿ ಕೃಷಿ ಭೂಮಿಗಳನ್ನು ವರ್ಗಾವಣೆ ಮಾಡಲು ಸ್ವತ್ತುಗಳ ವರ್ಗಾವಣೆ ಅಧಿನಿಯಮ, 1882ನ್ನು (1882ರ ಕೇಂದ್ರ ಅಧಿನಿಯಮ IV) ಅನ್ವಯಿಸುವುದಕ್ಕೆ ಉಪಬಂಧ ಕಲ್ಪಿಸುವ ಈ ಅಧಿನಿಯಮವು ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿದೆ. ಭೂ ಸುಧಾರಣಾ ಅಧಿನಿಯಮ, 1961ರ 3ನೇ ಪ್ರಕರಣದ ಮೂಲಕ ರಾಜ್ಯದ ಗುಲ್ಬರ್ಗಾ ಪ್ರದೇಶದಲ್ಲಿ ಕೃಷಿ ಭೂಮಿಗಳ ವರ್ಗಾವಣೆಗೆ ಸ್ವತ್ತು ವರ್ಗಾವಣೆ ಅಧಿನಿಯಮವನ್ನು ಅನ್ವಯಿಸಲಾಗುತ್ತಿದೆ. ಸ್ವತ್ತು ವರ್ಗಾವಣೆ ಅಧಿನಿಯಮವು ಸಂಪೂರ್ಣ ರಾಜ್ಯದಲ್ಲಿ ಜಾರಿಯಲ್ಲಿರುತ್ತದೆ. ಏಕಸದಸ್ಯ ಆಯೋಗವು ಸಲಹೆ ನೀಡಿದಂತೆ ಸ್ವತ್ತು ವರ್ಗಾವಣೆ ಅಧಿನಿಯಮವು ಸಂಪೂರ್ಣ ರಾಜ್ಯದಲ್ಲಿ ಕೃಷಿ ಭೂಮಿಗಳ ವರ್ಗಾವಣೆಗೆ ಅನ್ವಯವಾಗುವಂತೆ ಈ ಅಧಿನಿಯಮವನ್ನು ಸಂಪೂರ್ಣ ರಾಜ್ಯಕ್ಕೆ ಅನ್ವಯಿಸುವಂತೆ ಪ್ರಸ್ತಾವಿಸಲಾಗಿದೆ. ಅಧಿನಿಯಮದ 1ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಕಂಡು ಬರುವ "ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ" ಎಂಬ ಪದಗಳನ್ನು 1955ರ ಮೈಸೂರು

ಅಧಿನಿಯಮ 14ರ 4ನೇ ಪ್ರಕರಣದ (3)ನೇ ಉಪ ಪ್ರಕರಣದ ಮೂಲಕ ಬಿಟ್ಟುಬಿಡಲಾಗಿದೆ.

12. ಮೈಸೂರು ಕರಾರು (ಕೃಷಿ ಭೂಮಿಗಳಿಗೆ ವ್ಯಾಪ್ತಿ) ಅಧಿನಿಯಮ, 1954ರಲ್ಲಿ (1954ರ ಮೈಸೂರು ಅಧಿನಿಯಮ 29)

ಈ ಅಧಿನಿಯಮವು ರಾಜ್ಯದ ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿದ್ದು, ಇದು ರಾಜ್ಯದ ಮೈಸೂರು ಪ್ರದೇಶದಲ್ಲಿ ಕೃಷಿ ಭೂಮಿಗಳಿಗೆ ಸಂಬಂಧಿಸಿದ ಕರಾರುಗಳಿಗೆ ಅನ್ವಯವಾಗುವಂತೆ ಅವುಗಳು ಇತರ ಭೂಮಿಗಳಿಗೂ ಅನ್ವಯವಾಗುವಲ್ಲಿ ಭಾರತ ಕರಾರು ಅಧಿನಿಯಮ, 1872ಕ್ಕೆ (1872ರ ಕೇಂದ್ರ ಅಧಿನಿಯಮ IX) ಅನ್ವಯಿಸುವುದಕ್ಕೆ ಉಪಬಂಧ ಕಲ್ಪಿಸುತ್ತದೆ. ಭಾರತ ಕರಾರು ಅಧಿನಿಯಮವು ಸಂಪೂರ್ಣ ರಾಜ್ಯದಲ್ಲಿ ಜಾರಿಯಲ್ಲಿದೆ. ಏಕಸದಸ್ಯ ಆಯೋಗವು ಸಲಹೆ ನೀಡಿದಂತೆ ಈ ಅಧಿನಿಯಮವನ್ನು ಸಂಪೂರ್ಣ ರಾಜ್ಯದಲ್ಲಿ ಜಾರಿಗೊಳಿಸಲು ಪ್ರಸ್ತಾಪಿಸ ಲಾಗಿದೆ. ಅಧಿನಿಯಮದ 1ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಕಂಡು ಬರುವ 'ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ" ಎಂಬ ಪದಗಳನ್ನು 1955ರ ಮೈಸೂರು ಅಧಿನಿಯಮ 14ರ 4ನೇ ಪ್ರಕರಣದ (3)ನೇ ಉಪ ಪ್ರಕರಣದ ಮೂಲಕ ಬಿಟ್ಟುಬಿಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಎಸ್. ಸುರೇಶ್ ಕುಮಾರ್
ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳು ಹಾಗೂ
ಸಂಸದೀಯ ವ್ಯವಹಾರಗಳ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

* * * * *

ಮುದ್ರಕರು: ಸರ್ಕಾರಿ ಭದ್ರತಾ ಮುದ್ರಣಾಲಯ, ಪೀಣ್ಯ, ಬೆಂಗಳೂರು.